ಕರ್ನಾಟಕ ಸರ್ಕಾರ
ಉಪತಹಶೀಲ್ದಾರರವರ ನ್ಯಾಯಾಲಯ
ಉಪತಹಶೀಲ್ದಾರವರ ನಾಡಕಛೇರಿ, ಹಂಪಸಾಗರ

ಸಂ/ಕಂ/ಪಹಣಿ/ವಿವಾದ/57/2015-16 ದಿ-25-4-16

ಉಪಸ್ಥಿತರು :- ಶ್ರೀ ಎ.ಚಂದ್ರನಾಯಕ, ಉಪತಹಶೀಲ್ದಾರರು
ನಾಡಕಛೇರಿ ಹಂಪಸಾಗರ

**ವಾದಿಗಳು :**
**1) ಶ್ರೀ ಗೌಡ್ರ ವೃಷಭೇಂದ್ರಗೌಡ ಇವರ ಮೈನರ್ ಮಕ್ಕಳಾದ 1) ಜಿ.ಪ್ರಿಯಾಂಕ 2) ಎಸ್.ಜಿ.ಸ್ವಾತಿ ಇವರ ನಿಗೇವಾನಿ ಜನಕ ತಾಯಿ ಜಿ.ಬಸಮ್ಮ ಗಂಡ ಗೌಡ್ರ ವೃಷಭೇಂದ್ರಗೌಡ**
**ಗ್ರಾಮ : ಸಕ್ರಿಹಳ್ಳಿ.**

**ಪ್ರತಿವಾದಿಗಳು :**
**1) ಶ್ರೀ ಸೋಮನಗೌಡ**
**2) ಶ್ರೀ ಸಣ್ಣ ಬಸವನಗೌಡ ತಂದೆ ದಿ॥ ಬಸವನಗೌಡ**
**ಗ್ರಾಮ : ಸಕ್ರಿಹಳ್ಳಿ**

**ವಿಷಯ :- ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಅಡವಿ ಕ್ಯಾದಿಗಿಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ 223/ಸಿ/2 ವಿಸ್ತೀರ್ಣ 3-25 ಎಕರೆ ಜಮೀನು ದಾನ ದಸ್ತಾವೇಜು ಪ್ರಕಾರ ಹಕ್ಕು ಬದಲಾವಣೆ ವಿಷಯದಲ್ಲಿ ಉಂಟಾದ ತಕರಾರು ವಿಚಾರಣೆ.**

**ಪೀಠಿಕೆ :-**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಅಡವಿಕ್ಯಾದಿಗಿಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 223/ಸಿ/2 ವಿಸ್ತೀರ್ಣ 3-25 ಎಕರೆ ಜಮೀನು ದಾನ ದಸ್ತಾವೇಜು ಸಂಖ್ಯೆ ಹೆಚ್‌ಬಿಹೆಚ್-1-03483-2015-16 ದಿ: 06-01-2016ರಂದು ಗೌಡ್ರ ವೃಷಭೇಂಧ್ರಗೌಡ ತಂದೆ ಕೊಟ್ರಗೌಡ ಇವರಿಂದ ಇವರ ಮೈನರ್ ಮಕ್ಕಳಾದ ವಾದಿಗಳ ಹೆಸರಿನಲ್ಲಿ ದಾನ ದಸ್ತಾವೇಜು ಮಾಡಿಕೊಟ್ಟಿರುತ್ತಾರೆ. ಇದರನ್ವಯ ಸದರಿ ವ್ಯವಹಾರಕ್ಕೆ ಸಂಬಂಧಿಸಿದಂತೆ ತಾಲೂಕು ಭೂಮಿ ಕೇಂದ್ರದಲ್ಲಿ ದಾಖಲಾಗಿ ವಹಿವಾಟು ಸಂಖ್ಯೆ 62/2015-16 ಹಾಗೂ ಹಕ್ಕು ಬದಲಾವಣೆ ಸಂಖ್ಯೆ ಹೆಚ್ 24/15-16 ರಂತೆ ದಾಖಲಾಗಿ ಪ್ರಕರಣಕ್ಕೆ ಸಂಬಂಧಿಸಿದ ಹಕ್ಕು ಬದಲಾವಣೆ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಮುಂದಿನ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರ ದ್ವಾರ ಗ್ರಾಮ ಲೆಕ್ಕಾಧಿಕಾರಿ ಅಡವಿಕ್ಯಾದಿಗಿಹಳ್ಳಿ ಇವರಿಂದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಜಾರಿ ಮಾಡಿರುತ್ತಾರೆ. ನೋಟೀಸುಗಳನ್ನು ಜಾರಿ ಮಾಡಲಾಗಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿವಾದಿಗಳು ತಮ್ಮ ತಕರಾರನ್ನು ತಾಲೂಕಾ ಭೂಮಿಕೇಂದ್ರದಲ್ಲಿನ ಸ್ವೀಕೃತಿ ಸಂಖ್ಯೆ 6075/2015-16 ರಂತೆ ದಾಖಲಿಸಿರುತ್ತಾರೆ. ತಕರಾರು ದಾಖಲಾದ ಹಿನ್ನೆಲೆಯಲ್ಲಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸುತ್ತಾ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ

Deemed copy
12/05/16

ಪ್ರಕರಣವನ್ನು ಈ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ದಿನಾಂಕ: 05-04-2016 ರಿಂದ 05-05-2016 ರವರೆಗೆ ವಿಚಾರಣೆ ನಡೆಸಲಾಯಿತು. ವಿಚಾರಣೆ ಮಾಡಲಾಗಿ ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ವಾದಿಗಳು ಹಾಜರಾಗಿರುತ್ತಾರೆ.

ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಹಾಲೀ ಪಹಣಿ ಲೆಕ್ಕದಾಖಲು ವೃಷಭೇಂದ್ರಗೌಡ ತಂದೆ ಕೊಟ್ರಗೌಡ ಇವರ ಹೆಸರಿನಲ್ಲಿದ್ದು ಸದರಿ ಆಸ್ತಿಯು ಇವರಿಗೆ ವಿಭಾಗದ ಪ್ರಕಾರ ಹಕ್ಕು ಬದಲಾವಣೆ ಸಂಖ್ಯೆ ಎಂ.ಆರ್/30/ 2011-12/ ದಿನಾಂಕ: 09-12-2011 ರಂತೆ ಹಕ್ಕು ಪ್ರಾಪ್ತಿವಾಗಿರುವುದು ಕಂಡು ಬಂದಿರುತ್ತದೆ. ಇದರನ್ವಯ ಸದರಿಯವರಿಂದ ವಾದಿಗಳಿಗೆ ದಾನ ದಸ್ತಾವೇಜು ಸಂಖ್ಯೆ ಹೆಚ್‌ಬಿಹೆಚ್-1-03483/2015-16/ದಿನಾಂಕ: 06-01-2016 ರಂದು ನೊಂದಣಿಯಾಗಿರುತ್ತದೆ. ವ್ಯವಹಾರವು ದಾಖಲೆಗಳ ಪ್ರಕಾರ ಸರಿ ಇರುತ್ತದೆ. ಆದರೆ ಪ್ರತಿವಾದಿಗಳು ತಕರಾರು ದಾಖಲಿಸುತ್ತಾ ಸದರಿ ಜಮೀನಿಗೆ ನಾವುಗಳು ಬಾಧ್ಯಸ್ಥರು ಇರುವುದಾಗಿಯೂ ಹಾಗೂ ನಮಗೆ ನ್ಯಾಯ ದೊರಕಿಸಿಕೊಡಬೇಕೆಂದು ತಕರಾರು ದಾಖಲಿಸಿರುತ್ತಾರೆ. ವಿವಾದಿತ ಆಸ್ತಿಯ ಹಕ್ಕು ಬದಲಾವಣೆ ಸಂಖ್ಯೆ ಎಂ.ಆರ್.30/2011-12/ದಿನಾಂಕ: 09-12-2011 ರಂತೆ ಹಕ್ಕು ಪ್ರಾಪ್ತವಾಗಿರುವುದರಿಂದ ಪ್ರತಿವಾದಿಗಳು ಸನ್ 2011-12ನೇ ಸಾಲಿನಲ್ಲಿ ಪ್ರಕರಣಕ್ಕೆ ಮೇಲ್ಮನವಿ ಸಲ್ಲಿಸಿಕೊಂಡು ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಳ್ಳಬೇಕಾಗಿತ್ತು. ಹೀಗಾಗಿ ಪ್ರತಿವಾದಿಗಳು ಸಲ್ಲಿಸಿರುವ ತಕರಾರು ದಾಖಲೆಯುಕ್ತವಾಗಿಲ್ಲವಿರುವುದು ಕಂಡು ಬರುತ್ತದೆ. ಹಾಗೂ ನ್ಯಾಯಾಲಯಕ್ಕೆ ಗೈರು ಹಾಜರಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರತಿವಾದಿಗಳು ತಮ್ಮ ಹಕ್ಕನ್ನು ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥಪಡಿಸಿಕೊಳ್ಳಲು ನಿರ್ದೇಶಿಸುತ್ತಾ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ, ಅಡವಿ ಕ್ಯಾದಿಗಿಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಸರ್ವೆ ನಂಬರ್. 223/ಸಿ/2 ವಿಸ್ತೀರ್ಣ 3-25 ಎಕರೆ ಜಮೀನನ್ನು ನೊಂದಾಯಿತ ದಾನ ದಸ್ತಾವೇಜು ಸಂಖ್ಯೆ ಹೆಚ್‌ಬಿಹೆಚ್-1-03483/2015-16 ರಂತೆ 1) ಗೌಡ್ರ ವೃಷಭೇಂದ್ರಗೌಡ್ರ ಮೈನರ್ ಮಕ್ಕಳಾದ 1) ಜಿ. ಪ್ರಿಯಾಂಕ 2) ಎಸ್.ಜಿ.ಸ್ವಾತಿ ಇವರ ನಿಗೇವಾನಿಯಾಗಿ ಜನಕ ತಾಯಿ ಜಿ. ಬಸಮ್ಮ ಗಂಡ ಗೌಡ್ರ ವೃಷಭೇಂಧ್ರಗೌಡ್ರ ಇವರ ಹೆಸರಿನಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 128 ಹಾಗೂ 129 ರನ್ವಯ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಪ್ರತಿಗಳು :

1) ವಾದಿ + ಪ್ರತಿವಾದಿಗಳು
2) ತಾಲೂಕಾ ಕಛೇರಿ ಭೂಮಿ ಕೇಂದ್ರಕ್ಕೆ
3) ಹೆಚ್ಚುವರಿ ಪ್ರತಿ ಕಡತಕ್ಕೆ